**ದಿನಾಂಕ: 04–10–2012 ರಂದು ತೋಟಗಾರಿಕೆ ಸ್ಥಾಯಿ ಸಮಿತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಉದ್ಯಾನವನಗಳ ಅಭಿವೃದ್ಧಿ ಮತ್ತು ನಿರ್ವಹಣೆ ಹಾಗೂ ನಗರವ್ಯಾಪ್ತಿ ಅರಣ್ಯೀಕರಣ ಮತ್ತು ಪರಿಸರ ನಿರ್ವಹಣೆ ಮತ್ತು ಕೆರೆಗಳ ಅಭಿವೃದ್ಧಿ ಕಾಮಗಾರಿಗೆ ಸಂಬಂಧಪಟ್ಟಂತೆ ನಡೆದ ಸಭೆಯ ನಡವಳಿಗಳು**

| ಹಾಜರಿದ್ದ ಸದಸ್ಯರು<br>ಶ್ರೀಯುತರಾದ : | | | ಹಾಜರಿದ್ದ ಅಧಿಕಾರಿಗಳು<br>ಶ್ರೀಯುತರಾದ | |
|---|---|---|---|---|
| 1 | **ಶ್ರೀ.ವೈ.ಎನ್.ಅಶ್ವಥ್** | ಅಧ್ಯಕ್ಷರು | 1 | **ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ** |
| 2 | ಶ್ರೀ.ಎನ್.ಚಂದ್ರಶೇಖರ್‌ರಾಜು | | 2 | ಉಪ ಅರಣ್ಯ ಸಂರಕ್ಷಣಾಧಿಕಾರಿ(ಉತ್ತರ) & (ದಕ್ಷಿಣ) |
| 3 | ಶ್ರೀ.ಎಂ.ಸಿ.ಶ್ರೀನಿವಾಸ್ | ಸದಸ್ಯರು | 3 | ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ(ಉತ್ತರ) & (ದಕ್ಷಿಣ) |
| 4 | ಶ್ರೀಮತಿ.ಶಕುಂತಲ.ಎನ್ | ಸದಸ್ಯರು | 4 | ವಲಯ ಅರಣ್ಯಾಧಿಕಾರಿಗಳು–(**ಪೂರ್ವ/ಪಶ್ಚಿಮ/ ದಕ್ಷಿಣ/ ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ/ ರಾ.ರಾ.ನಗರ)** |
| 5 | ಶ್ರೀಮತಿ.ನಂದಿನಿ.ಕೆ | ಸದಸ್ಯರು | 5 | |
| 6 | ಶ್ರೀಮತಿ.ಲಕ್ಷ್ಮಿ | ಸದಸ್ಯರು | 6 | ಕಾರ್ಯಪಾಲಕ ಅಭಿಯಂತರರು (ಯೋಜನೆ–ಕೆರೆಗಳು) |
| 7 | ಶ್ರೀ.ಎಸ್.ಗಂಗಾಧರ್ | ಸದಸ್ಯರು | 7 | ತೋಟಗಾರಿಕೆ ಅಧೀಕ್ಷಕರು – **(ಪೂರ್ವ/ಪಶ್ಚಿಮ/ದಕ್ಷಿಣ/ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ/ರಾ.ರಾ.ನಗರ)** |
| 8 | ಶ್ರೀಮತಿ.ಸೀಮಾ ಖಾನಂ | ಸದಸ್ಯರು | | |
| 9 | ಶ್ರೀ.ಎಮ್.ಶಿವರಾಜು | ಸದಸ್ಯರು | 8 | ಕಾ.ಪಾ.ಅ.(ಯೋಜನೆ – **(ಪೂರ್ವ/ ಪಶ್ಚಿಮ/ ದಕ್ಷಿಣ/ ದಾಸರಹಳ್ಳಿ/ ಬೊಮ್ಮನಹಳ್ಳಿ / ಯಲಹಂಕ/ ಮಹದೇವಪುರ/ ರಾ.ರಾ.ನಗರ)** |
| 10 | ಶ್ರೀಮತಿ.ಸರಳ | ಸದಸ್ಯರು | | |
| 11. | ಶ್ರೀ.ತಿಮ್ಮರಾಜು | ಸದಸ್ಯರು | 9 | ಕಾ.ಪಾ.ಅ.(ಕೆರೆಗಳು–ಪರಿಸರ ಕೋಶ 1, 2, 3, 4, 5,) |

**(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)**

ಮಾನ್ಯ ಅಧ್ಯಕ್ಷರು ಸಭೆಯ ಅಧ್ಯಕ್ಷತೆ ವಹಿಸಿ ಸಭೆಯಲ್ಲಿ ಹಾಜರಿದ್ದ ಸಮಿತಿ ಸದಸ್ಯರು ಹಾಗೂ ಅಧಿಕಾರಿಗಳಿಗೆ ಹೃತ್ಪೂರ್ವಕವಾದ ಸ್ವಾಗತ ಕೋರಿದರು.

2012–13ನೇ ಸಾಲಿನ ಕಾರ್ಯಕ್ರಮ ಪಟ್ಟಿಯು ಯಾವ ಹಂತದಲ್ಲಿದೆ ಹಾಗೂ ಕೆರೆ ಅಭಿವೃದ್ಧಿ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಯಾವ ಹಂತದಲ್ಲಿದೆ ಎಂಬ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸುತ್ತಾ, ಟೆಂಡರ್ ಕರೆಯಲು ಬಾಕಿ ಇರುವ ಟೆಂಡರ್ ಪ್ರಕ್ರಿಯೆಯನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಸೂಚಿಸಿದರು.

ನೆಡುತೋಪು ನಿರ್ಮಾಣ ಮತ್ತು ನಿರ್ವಹಣೆ, ಹಳೆಯ ನೆಡುತೋಪುಗಳ ನಿರ್ವಹಣೆ, ನೆಡುತೋಪು ನಿರ್ಮಾಣ ಮತ್ತು ನಿರ್ವಹಣೆ ಕಾಮಗಾರಿಗೆ ಅವಶ್ಯಕತೆ ಇರುವ ವೃಕ್ಷಕವಚಗಳ ಸರಬರಾಜಿನ ಬಗ್ಗೆ ಹಾಗೂ ಮರಗಳ ವ್ಯವಸ್ಥಿತ ನಿರ್ವಹಣೆಗೆ ಸಂಬಂಧಪಟ್ಟಂತೆ ಮೇಲಿನ ನಾಲ್ಕು ಕಾಮಗಾರಿಗಳನ್ನು ಸಮಿತಿಯು ಅಸ್ಥಿತ್ವದಲ್ಲಿದ್ದರೂ ಸಹ ಸಮಿತಿಯ ಗಮನಕ್ಕೆ ತರದೆ, ಸಮಿತಿಯ ಅಧಿಕಾರ ಪ್ರತ್ಯಾಯೋಜನೆಯನ್ನು ಉಲ್ಲಂಘನೆ ಮಾಡಿ ಟೆಂಡರ್ ಕರೆದಿರುವ ವಿಷಯವು ಸಮಿತಿಯ ಗಮನಕ್ಕೆ ಬಂದಿದ್ದು, ಟೆಂಡರ್ ಕರೆದಿರುವ ಕಡತಗಳನ್ನು ಕೂಡಲೇ ಸಮಿತಿಗೆ ಮಂಡಿಸುವಂತೆ ಹಾಜರಿದ್ದ ಅಧಿಕಾರಿಗಳಿಗೆ ಸೂಚಿಸಿದರು.

***ಉಪ ಅರಣ್ಯ ಸಂರಕ್ಷಣಾಧಿಕಾರಿಗಳು*** ಮಾತನಾಡುತ್ತಾ, ಬಜೆಟ್ ಅನುಮೋದನೆಯಾದ ನಂತರ ಪಿ.ಓ.ಡಬ್ಲ್ಯೂ.ವನ್ನು ತಯಾರಿಸಿಕೊಂಡು ಮಾಡಲು ಒಂದು ವರ್ಷವಾಗುತ್ತದೆ. ನರ್ಸರಿಗಳಲ್ಲಿ ಬೆಳೆಸಲಾಗುವ ಸಸಿಗಳು ದೊಡ್ಡದಾಗಿ ಬೆಳೆದುಬಿಡುತ್ತವೆ, ಅಂತಹ ಗಿಡಗಳು ನೆಡಲು

ಯೋಗ್ಯವಾಗಿರುವುದಿಲ್ಲ. ಆದಪ್ರಯುಕ್ತ, ಮಳೆಗಾಲ ಪ್ರಾರಂಭಕ್ಕೆ ಮುಂಚಿತವಾಗಿ ಟೆಂಡರ್ ಕರೆದು ಕಾಮಗಾರಿಗಳನ್ನು ಪ್ರಾರಂಭಿಸಬೇಕಾಗಿರುವುದರಿಂದ ಹಾಗೂ ಟೆಂಡರ್ ಪ್ರಕ್ರಿಯೆ ವಿಳಂಬವಾಗುವ ಹಿನ್ನೆಲೆಯಲ್ಲಿ, ಮಾನ್ಯ ಆಯುಕ್ತರ ಅನುಮೋದನೆ ಪಡೆದು ಪಿ.ಓ.ಡಬ್ಲ್ಯೂ ಮಾಡಿಕೊಂಡು, ಟೆಂಡರ್ ಪ್ರಕ್ರಿಯೆ ಪ್ರಾರಂಭ ಮಾಡಿ ತದನಂತರ, ಜಾಬ್‌ಕೋಡ್ ಪಡೆಯುವುದಕ್ಕೆ ಮೊದಲು ಸಮಿತಿಯ ಅನುಮೋದನೆಗೆ ಕಡತಗಳನ್ನು ಮಂಡಿಸಲಾಗುವುದೆಂದು ತಿಳಿಸಿದರು. ಇದರಿಂದ ಮಳೆಗಾಲ ಪ್ರಾರಂಭವಾಗುವ ಮುಂಚಿತವಾಗಿಯೇ ಕಾಮಗಾರಿಗಳನ್ನು ಪ್ರಾರಂಭಿಸಲು ಅನುಕೂಲವಾಗುತ್ತದೆಂಬ ದೃಷ್ಠಿಯಿಂದ ತ್ವರಿತವಾಗಿ ಟೆಂಡರ್ ಕರೆಯಲಾಗಿದೆಯೆಂದು ಮನವಿ ಮಾಡಿದರು ಮತ್ತು 56,000 ಬಂಬೂ ಟ್ರೀಗಾರ್ಡ್‌ಗಳು ಸಪ್ಲೈ ಆಗಿದ್ದು, ಕಡತವನ್ನು ಸಮಿತಿಯ ಅನುಮೋದನೆಗೆ ಕಳುಹಿಸಲಾಗುತ್ತದೆಂದು ತಿಳಿಸಿದರು.

***<u>ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು</u>*** *ಮಾತನಾಡುತ್ತಾ, ಉದ್ಯಾನವನಗಳ ನಿರ್ವಹಣೆಗೆ ಸಂಬಂಧಿಸಿದಂತೆ, ಉದ್ಯಾನವನದಲ್ಲಿ ಕಾರ್ಯನಿರ್ವಹಿಸುವ ಕೆಲಸಗಾರರಿಗೆ ಕಳೆದ ಎರಡು ವರ್ಷಗಳಿಂದ ನೀಡುತ್ತಿರುವ ಎಸ್.ಆರ್. ದರಗಳನ್ನೇ ಈಗಲೂ ಮುಂದುವರೆಸಿಕೊಂಡು ಹೋಗುತ್ತಿದ್ದು, ಇದರಿಂದ ಸಮರ್ಪಕವಾಗಿ ಉದ್ಯಾನವನಗಳ ನಿರ್ವಹಣೆ ಕಾರ್ಯವನ್ನು ನಿರ್ವಹಿಸಲು ತೊಂದರೆಯಾಗುತ್ತಿರುವ ಹಿನ್ನೆಲೆಯಲ್ಲಿ ನ್ಯೂನ್ಯತೆಗಳನ್ನು ಸರಿಪಡಿಸಿಕೊಂಡು, ಎಸ್.ಆರ್.ದರವನ್ನು ಮೊದಲಿಗಿಂತ ಮೂರು ಪಟ್ಟು ಜಾಸ್ತಿ ಮಾಡಿ, ಕೆಲಸಗಾರರ ಪ್ರಮಾಣವನ್ನು ಕಡಿತಗೊಳಿಸಲಾಗುವುದೆಂದು, ಇದರಿಂದ ಯಾವುದೇ ಸಮಸ್ಯೆಗಳು ಉದ್ಭವವಾಗುವುದಿಲ್ಲವೆಂದು ಸಲಹೆ ನೀಡಿದರು.*

***ಅಧ್ಯಕ್ಷರು*** *ಮಾತನಾಡುತ್ತಾ, ಉದ್ಯಾನವನಗಳ ಸ್ಥಿರೀಕರಣ ಕಡತವನ್ನು ಸಮಿತಿಯ ಮಂಡಿಸದೇ ಇರುವ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿ, ಉದ್ಯಾನವನಗಳ ಸ್ಥಿರೀಕರಣ ಕಡತವನ್ನು ಸಮಿತಿಗೆ ಕೂಡಲೇ ಒದಗಿಸುವಂತೆ ಸೂಚಿಸಿದರು ಹಾಗೂ 2012-13ನೇ ಸಾಲಿನ ಕಾರ್ಯಕ್ರಮ ಪಟ್ಟಿಯನ್ನು ತಯಾರಿಸಿರುವ ಬಗ್ಗೆ ಚರ್ಚಿಸಿದರು.*

ಸಮಿತಿಯು ಒಳ್ಳೆಯ ಹೆಸರು ಗಳಿಸಲು ಹಾಗೂ ಬೆಂಗಳೂರು ನಗರವು ಅಭಿವೃದ್ಧಿ ಹೊಂದಲು ಅಧಿಕಾರಿಗಳ ಸಹಕಾರವಿದ್ದರೆ ಮಾತ್ರ ಸಾಧ್ಯವಾಗುತ್ತದೆಂದು, ಈ ನಿಟ್ಟಿನಲ್ಲಿ ಹೆಚ್ಚಿನ ಶ್ರಮ ವಹಿಸಿ ಕೆಲಸ ನಿರ್ವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಸಮಿತಿಯ ಮುಂದಿರುವ ವಿಷಯಗಳ ಬಗ್ಗೆ ಅಧ್ಯಕ್ಷರು, ಸಮಿತಿಯ ಸದಸ್ಯರು ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿ, ಈ ಕೆಳಕಂಡಂತೆ ತೀರ್ಮಾನವನ್ನು ತೆಗೆದುಕೊಳ್ಳಲಾಯಿತು.

1. **<u>ವಿಷಯ ಸಂಖ್ಯೆ:ತೋ/ಸ್ಥಾ/ಸ/22/12-13, ದಿನಾಂಕ: 18-08-2012</u>**

2011-12ನೇ ಸಾಲಿನ ಆಯವ್ಯಯದ 01-ಕೌನ್ಸಿಲ್ ಸಾಮಾನ್ಯ ವೆಚ್ಚಗಳು-ಮಹಾಪೌರರರು ಆಜ್ಞೆ ಮಾಡಿದ ಕಾಮಗಾರಿಗಳು ಶೀರ್ಷಿಕೆ ಅಡಿಯಲ್ಲಿ ವಾರ್ಡ್ – 103, ವ್ಯಾಪ್ತಿಗೊಳಪಡುವ ಕೆರೆ ಮತ್ತು ಮಾಳಗಾಳ ಅಭಿವೃದ್ಧಿ, ಶಿಥಿಲಗೊಂಡಿರುವ ಪಾದಚಾರಿಗಳ ಮಾರ್ಗ ಪುನರ್ ನಿರ್ಮಾಣ, ಕರ್ಬ್‌ಗಳಿಗೆ ಬಣ್ಣ ಬಳಿಯುವ ಕಾಮಗಾರಿ, ತಂತಿ ಬೇಲಿ ದುರಸ್ಥಿ ಹಾಗೂ ಅಳವಡಿಕೆ ಕೊಳವೆ ಬಾವಿ ಕೊರೆಸುವುದು,

ಉದ್ಯಾನವನಗಳ ಮುಖ್ಯದ್ವಾರಗಳಲ್ಲಿ ಗ್ರಿಲ್ ಅಳವಡಿಕೆ ಕಾಮಗಾರಿ ಮತ್ತು ಇತರೇ ಮುಖ್ಯ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಸಲುವಾಗಿ ರೂ.99.00 ಲಕ್ಷ ಅನುದಾನವನ್ನು ಬಿಡುಗಡೆ ಮಾಡಲು ಆಯುಕ್ತರಿಗೆ ಸೂಚಿಸಿರುತ್ತಾರೆ.

ಆಯುಕ್ತರು ಈ ಕಾಮಗಾರಿಗಳನ್ನು 2011-12ನೇ ಸಾಲಿನ spill over ಕಾಮಗಾರಿಗಳೆಂದು ಪರಿಗಣಿಸಿ, 2012-13ನೇ ಸಾಲಿನ ಆಯವ್ಯಯದಲ್ಲಿ ಅನುದಾನವನ್ನು ಒದಗಿಸಿಕೊಂಡು ಅನುಷ್ಟಾನಗೊಳಿಸುವಂತೆ ಆದೇಶಿಸಿರುತ್ತಾರೆ ಹಾಗೂ ಆಡಳಿತಾತ್ಮಕ, ತಾಂತ್ರಿಕ ಮತ್ತು ಟೆಂಡರ್ ಪ್ರಕ್ರಿಯೆಯನ್ನು ನಡೆಸಲು ಅನುಮೋದನೆ ನೀಡಿರುತ್ತಾರೆ. ಆದರೆ, ಮುಖ್ಯ ಅಭಿಯಂತರರು(ಪಶ್ಚಿಮ), ಇವರು ಕಡತವನ್ನು ಮರುಮಂಡಿಸಿ ಉದ್ಯಾನವನದ ಸಂರಕ್ಷಣೆ ಹಾಗೂ ಅಭಿವೃದ್ಧಿಯ ಸಲುವಾಗಿ ತಂತಿಬೇಲಿಯನ್ನು ತುರ್ತಾಗಿ ಅಳವಡಿಸುವುದು ಅತ್ಯಾವಶ್ಯಕವೆಂದು ತಿಳಿಸಿ, ಕಾಮಗಾರಿಯನ್ನು ಕೆ.ಆರ್.ಐ.ಡಿ.ಎಲ್. ಮುಖೇನ ನಿರ್ವಹಿಸಲು ಕಡತವನ್ನು ಮರು ಪರಿಶೀಲಿಸಲು ಮಂಡಿಸಿರುವ ಹಿನ್ನೆಲೆಯಲ್ಲಿ, ಪ್ರಸ್ತಾವನೆಯಲ್ಲಿನ ಈ ಕೆಳಕಂಡ ಅಂಶಗಳ ಬಗ್ಗೆ ಆದೇಶ ಕೋರಿ, ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:11-05-2012 ರ ಟಿಪ್ಪಣಿ.

**ಅ)** ರೂ.99.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ನಿರ್ಮಿಸಲು ಉದ್ದೇಶಿಸಿರುವ ವಿವಿಧ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ.

**ಆ)** ಈ ಕಾಮಗಾರಿಗಳನ್ನು ಕೆ.ಆರ್.ಐ.ಡಿ.ಎಲ್. ಮುಖೇನ ಅನುಷ್ಟಾನಗೊಳಿಸಲು ಅನುಮೋದನೆ.

**ಇ)** 2012-13ನೇ ಸಾಲಿನ ಆಯವ್ಯಯದ ಅನುಮೋದನೆ ನಿರೀಕ್ಷಿಸಿ ಸದರಿ ಕಾಮಗಾರಿಗಳನ್ನು ಕೈಗೊಳ್ಳಲು ಅನುಮತಿ.

**<u>ನಿರ್ಣಯ:-</u> ದಿನಾಂಕ:11-05-2012 ರ ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ಟಿಪ್ಪಣಿಯನ್ನು ಒಪ್ಪುವುದು ಹಾಗೂ 2012-13ನೇ ಸಾಲಿನ ಆಯವ್ಯಯದ ಪುಟ ಸಂಖ್ಯೆ.61, ಪಿಓ-290 ಲೆಕ್ಕ ಶೀರ್ಷಿಕೆಯಡಿಯಲ್ಲಿ ಜಾಬ್‌ಕೋಡ್ ಪಡೆಯಲು ಸಮಿತಿಯು ತೀರ್ಮಾನಿಸಿತು.**

## 2. <u>ವಿಷಯ ಸಂಖ್ಯೆ:ತೋ/ಸ್ಥಾ/ಸ/23/12-13, ದಿನಾಂಕ:04-10-2012</u>

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 198 ವಾರ್ಡ್‌ಗಳಲ್ಲಿ ಬರುವ ಉದ್ಯಾನವನಗಳ ಅಭಿವೃದ್ಧಿ ಹಾಗೂ ನಿರ್ವಹಣೆಗೆ 2012-13ನೇ ಸಾಲಿನ ಆಯವ್ಯಯದಲ್ಲಿ ಈ ಕೆಳಕಂಡ ಲೆಕ್ಕಶೀರ್ಷಿಕೆಯ ಅನುದಾನದಡಿಯಲ್ಲಿ ಕಾಯ್ದಿರಿಸಿರುವಂತೆ, ಮಾನ್ಯ ಆಯುಕ್ತರ ದಿನಾಂಕ:07-08-2012ರ ಸುತ್ತೋಲೆ ಪ್ರಕಾರ, ಈ ಕೆಳಕಂಡ ಲೆಕ್ಕಶೀರ್ಷಿಕೆಯಡಿಯಲ್ಲಿರುವ ಅನುದಾನಕ್ಕನುಗುಣವಾಗಿ ಕಾರ್ಯಕ್ರಮ ಪಟ್ಟಿ (ಪಿ.ಓ.ಡಬ್ಲ್ಯೂ)ಯನ್ನು ತಯಾರಿಸಲು ಸಮಿತಿಯು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿ, ಈ ಕೆಳಕಂಡ ರೀತಿಯಲ್ಲಿ ಅನುಮೋದನೆ ಪಡೆಯುವಂತೆ ತೀರ್ಮಾನಿಸಿದೆ.

| ಕ್ರ. ಸಂ. | ಶೀರ್ಷಿಕೆ ವಿವರ | ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|
| 1. | ಕೊಳವೆ ಬಾವಿಗಳನ್ನು ಕೊರೆದು ಮತ್ತು ನಿರ್ವಹಣೆ, ಪಂಪ್ ಸೆಟ್‌ಗಳು ಮತ್ತು ಪೈಪ್‌ಲೈನ್‌ಗಳ ನಿರ್ಮಾಣ, ಅಳವಡಿಸುವುದು, ಇತ್ಯಾದಿ. (ಪಿ.ಓ–299) | 200.00 |
| 2. | ಉದ್ಯಾನವನಗಳ ಭೂವಿನ್ಯಾಸ, ವೃತ್ತಗಳು, ಮೀಡಿಯನ್‌ಗಳು, ಬುಲೇವಾರ್ಡ್‌ಗಳ ಅಭಿವೃದ್ಧಿ. (ಪಿ.ಓ–311) | 500.00 |
| 3. | ಉದ್ಯಾನವನಗಳಿಗೆ ದೀಪಗಳು ಮತ್ತು ಶೌಚಾಲಯಗಳ ವ್ಯವಸ್ಥೆ | 50.00 |
| 4. | ಗುತ್ತಿಗೆ ಆಧಾರದ ಮೇಲೆ ಉದ್ಯಾನವನಗಳ ನಿರ್ವಹಣೆ (ಪಿ.ಓ–088) | 4700.00 |
| 5. | ಬಿ.ಬಿ.ಎಂ.ಪಿ. ನಿರ್ವಹಿಸುತ್ತಿರುವ ಉದ್ಯಾನವನಗಳಿಗೆ ಮತ್ತು ಅಂತರಿಕ ನರ್ಸರಿಗಳಿಗೆ ಉಪಕರಣಗಳನ್ನು ಖರೀದಿಸುವುದು. (ಪಿ–1885) | 50.00 |
| 6. | ಮಳೆನೀರು ಕೊಯ್ಲು ಮತ್ತು ಭೂಜಲ ಹೆಚ್ಚಿಸುವಿಕೆ – ನರ್ಸರಿಗಳಿಗೆ (ಪಿ–1519) | 500.00 |
| | **ಒಟ್ಟು ರೂ.** | **6000.00** |

ಮೇಲ್ಕಂಡ ಮೊತ್ತವನ್ನು 2012–13ನೇ ಸಾಲಿನ ಆಯವ್ಯಯದ ಅಂದಾಜಿನ ಲೆಕ್ಕ ಶೀರ್ಷಿಕೆಯಡಿ ಕಾಯ್ದಿರಿಸಿದ್ದು, ಸದರಿ ಮೊತ್ತ ರೂ.6000.00 ಲಕ್ಷಗಳಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಬರುವ ಉದ್ಯಾನವನಗಳನ್ನು ಅಭಿವೃದ್ಧಿಪಡಿಸಿ ಮತ್ತು ನಿರ್ವಹಣೆ ಮಾಡಲು ಹಾಗೂ ವಾರ್ಡ್‌ಗಳಲ್ಲಿ ಬರುವ ಸಿ.ಎ. ನಿವೇಶನ, ಆಟದ ಮೈದಾನ ಹಾಗೂ ಉದ್ಯಾನವನಕ್ಕೆ ಮೀಸಲಿಟ್ಟಿರುವ ಜಾಗವನ್ನು ರಕ್ಷಿಸಿ ಕೊಳ್ಳಲು ತಂತಿಬೇಲಿ ಮತ್ತು ಗ್ರಿಲ್‌ಗಳನ್ನು ಅಳವಡಿಸಿ ಅಭಿವೃದ್ಧಿಪಡಿಸಲು ಹಾಗೂ ಉದ್ಯಾನವನಗಳಲ್ಲಿ ವಾಯುವಿಹಾರಕ್ಕೆ ನಡುದಾರಿ ನಿರ್ಮಿಸಲು ಸಮಿತಿಯು, ಈ ಕೆಳಕಂಡಂತೆ ಹಂಚಿಕೆ ಮಾಡಿರುವ ವಲಯವಾರು ಅನುದಾನಕ್ಕೆ ಕಾಮಗಾರಿಗಳ ಕಾರ್ಯಕ್ರಮ ಪಟ್ಟಿಯನ್ನು ತಯಾರಿಸಿಕೊಂಡು ಸಮಿತಿಯ ಅನುಮೋದನೆ ಪಡೆಯುವಂತೆ ಸಮಿತಿಯು ನಿರ್ಣಯ ತೆಗೆದುಕೊಂಡಿರುತ್ತದೆ.

| ವಲಯಗಳು | ಮೊತ್ತ (ರೂ.ಲಕ್ಷಗಳಲ್ಲಿ) |
|---|---|
| ಪೂರ್ವ ವಲಯದಲ್ಲಿ ಬರುವ ಉದ್ಯಾನವನಗಳನ್ನು ಅಭಿವೃದ್ಧಿ ಪಡಿಸುವುದು. | 250.00 |
| ಪಶ್ಚಿಮ ವಲಯದಲ್ಲಿ ಬರುವ ಉದ್ಯಾನವನಗಳನ್ನು ಅಭಿವೃದ್ಧಿ ಪಡಿಸುವುದು. | 250.00 |
| ದಕ್ಷಿಣ ವಲಯದಲ್ಲಿ ಬರುವ ಉದ್ಯಾನವನಗಳನ್ನು ಅಭಿವೃದ್ಧಿ ಪಡಿಸುವುದು. | 250.00 |
| ಬೊಮ್ಮನಹಳ್ಳಿ ವಲಯದಲ್ಲಿ ಬರುವ ಉದ್ಯಾನವನಗಳನ್ನು ಅಭಿವೃದ್ಧಿ ಪಡಿಸುವುದು. | 250.00 |
| ಯಲಹಂಕ ವಲಯದಲ್ಲಿ ಬರುವ ಉದ್ಯಾನವನಗಳನ್ನು ಅಭಿವೃದ್ಧಿಪಡಿಸುವುದು. | 200.00 |
| ರಾಜರಾಜೇಶ್ವರಿನಗರ ವಲಯದಲ್ಲಿ ಬರುವ ಉದ್ಯಾನವನಗಳನ್ನು ಅಭಿವೃದ್ಧಿ ಪಡಿಸುವುದು. | 300.00 |
| ದಾಸರಹಳ್ಳಿ ವಲಯದಲ್ಲಿ ಬರುವ ಉದ್ಯಾನವನಗಳನ್ನು ಅಭಿವೃದ್ಧಿಪಡಿಸುವುದು. | 200.00 |
| ಮಹದೇವಪುರ ವಲಯದಲ್ಲಿ ಬರುವ ಉದ್ಯಾನವನಗಳನ್ನು ಅಭಿವೃದ್ಧಿ ಪಡಿಸುವುದು. | 300.00 |
| **ಒಟ್ಟು ರೂ.** | **2000.00** |

ಮೇಲಿನ ಎಂಟು ವಲಯಗಳ ವ್ಯಾಪ್ತಿಯಲ್ಲಿ ಬರುವ ಉದ್ಯಾನವನಗಳ ಅಭಿವೃದ್ಧಿ ಮತ್ತು ನಿರ್ವಹಣೆಗೆ, ಉದ್ಯಾನವನಗಳ ಭೂವಿನ್ಯಾಸ, ವೃತ್ತಗಳು, ಮೀಡಿಯನ್‌ಗಳು, ಬುಲೇವಾರ್ಡ್‌ಗಳ ಅಭಿವೃದ್ಧಿ, ಮಳೆನೀರು ಕೊಯ್ಲು ಮತ್ತು ಭೂಜಲ ಹೆಚ್ಚಿಸುವಿಕೆ – ನರ್ಸರಿಗಳಿಗೆ, **ರೂ.2000.00** ಲಕ್ಷಗಳನ್ನು ವಲಯವಾರು ಹಂಚಿಕೆ ಮಾಡಿದ್ದು ಹಾಗೂ ಪಾಲಿಕೆಯ 198 ವಾರ್ಡ್‌ಗಳಲ್ಲಿ ಬರುವ ಉದ್ಯಾನವನಗಳ ನಿರ್ವಹಣೆಗೆ **ರೂ.2800.00** ಲಕ್ಷಗಳನ್ನು ಹಂಚಿಕೆ ಮಾಡಿದ್ದು, ಆಯುಕ್ತರ **ದಿನಾಂಕ:07–08–2012ರ** ಸುತ್ತೋಲೆ ಪ್ರಕಾರ, ಜಾಬ್‌ಕೋಡ್ ಪಡೆದು, ಜರೂರಾಗಿ ಟೆಂಡರ್ ಕರೆದು ಕಾಮಗಾರಿಗಳನ್ನು ಕೈಗೊಳ್ಳುವುದು ಹಾಗೂ **ರೂ.6000.00** ಲಕ್ಷಗಳ ಮೊತ್ತದಲ್ಲಿ ಉಳಿಕೆ **ರೂ.1200.00** ಲಕ್ಷಗಳನ್ನು, ಈ ಕೆಳಕಂಡ ಸಮಿತಿಯ ಸದಸ್ಯರುಗಳ ವಾರ್ಡ್‌ಗಳಲ್ಲಿ ಬರುವ ಉದ್ಯಾನವನಗಳನ್ನು ಅಭಿವೃದ್ಧಿಪಡಿಸಲು ಹಾಗೂ ಪಾಲಿಕೆ ಆಸ್ತಿಯನ್ನು ಸಂರಕ್ಷಿಸಿಕೊಂಡು ಉದ್ಯಾನವನಗಳನ್ನು ಅಭಿವೃದ್ಧಿಪಡಿಸಲು, ಈ ಕೆಳಕಂಡಂತೆ ಅನುದಾನವನ್ನು ಕಾಯ್ದಿರಿಸಿ, ಕಾಮಗಾರಿಗಳನ್ನು ಕೈಗೊಳ್ಳುವಂತೆ ಸಮಿತಿಯು ನಿರ್ಣಯ ತೆಗೆದುಕೊಂಡಿರುತ್ತದೆ.

| ವಾರ್ಡ್ ಸಂಖ್ಯೆ | ಕಾಯ್ದಿರಿಸಿರುವ ಅನುದಾನ ರೂ.ಲಕ್ಷಗಳಲ್ಲಿ) |
|---|---|
| 01, 42, 159, 160 | 246.00 |
| 28 | 95.00 |
| 42 | 95.00 |
| 125 | 95.00 |
| 09 | 95.00 |
| 177 | 95.00 |
| 44 | 95.00 |
| 114 | 95.00 |
| 136 | 95.00 |
| 75 | 99.00 |
| 196 | 95.00 |

ಸಮಿತಿಯ ಸದಸ್ಯರುಗಳ ವಾರ್ಡ್‌ಗಳಿಗೆ ಮೇಲ್ಕಂಡಂತೆ ಕಾಯ್ದಿರಿಸಿರುವ ಅನುದಾನವನ್ನು (ರೂ.1200.00 ಲಕ್ಷಗಳು) ಟೆಂಡರ್ ಕರೆದು, ಟೆಂಡರ್ ಪ್ರಕ್ರಿಯೆ ನಡೆಸುವ ಹಂತದಲ್ಲಿ ತುಂಬಾ ವಿಳಂಬವಾಗುವ ಪ್ರಯುಕ್ತ, ಸದಸ್ಯರುಗಳ ವಾರ್ಡ್‌ಗಳಲ್ಲಿ ತುರ್ತಾಗಿ ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿರುವುದರಿಂದ, ಸದಸ್ಯರುಗಳ ಅನುದಾನವನ್ನು ಕೆ.ಆರ್.ಆರ್.ಐ.ಡಿ.ಎಲ್. ಸಂಸ್ಥೆಗೆ ವಹಿಸಿ, ಕಾಮಗಾರಿಗಳನ್ನು ಕೈಗೊಳ್ಳಲು ಸಮಿತಿಯು ಸರ್ವಾನುಮತದಿಂದ ತೀರ್ಮಾನಿಸಿತು.

ಕೊನೆಯದಾಗಿ, ಈ ಸಭೆಯಲ್ಲಿ ಮೇಲಿನ ವಿಷಯದ ಬಗ್ಗೆ ಚರ್ಚಿಸುವಾಗ ಅಧಿಕಾರಿಗಳ ಸಲಹೆ ಹಾಗೂ ಸಮಿತಿಯ ಸದಸ್ಯರ ಸಲಹೆಗಳನ್ನು ಪಾಲಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಕ್ರಮವಹಿಸುವಂತೆ ಸುತ್ತೋಲೆ ಹೊರಡಿಸಿ ಕಾರ್ಯಪ್ರವೃತ್ತರಾಗಬೇಕೆಂದು, ಮಾನ್ಯ ಆಯುಕ್ತರನ್ನು ಕೋರುತ್ತಾ, ವಂದನೆಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಅಧ್ಯಕ್ಷರು
ತೋಟಗಾರಿಕೆ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ